ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

Tuesday, 19th March 1974—Phalguna 28, 1895 S.E.

The House met in the Assembly Chamber, Vidhana Soudha, at One of the Clock.

Madam Speaker (Smt. K. S. NAGARATHNAMMA) in the Chair.

STARRED QUESTIONS

(to which oral answers were given)

ALLOTMENT OF FERTILISER TO SUB-AGENTS OF A.I.C.

9. Sri BAPUGOUDA RAYAPPA (Shahapur).—

Will the Minister for Agriculture and Animal Husbandry be pleased to state.—

(*a*) whether it is not a fact that in the years 1969, 1970, and 1971 the A.I.C. has given fertiliser to its Sub-Agents on credit basis in the State;

(*b*) if so, the number of such Sub-Agents in the State and the value of the fertiliser given to their agents;

(*c*) the amount over due from the Sub-Agents ?

Sri N. CHIKKE GOWDA (Minister for Agriculture and Animal Husbandry).—

(*a*) Yes.

(*b*) 345—Rs. 1,80,09,000.

(*c*) Rs. 67,76,964.32.

ಶ್ರೀ ಬಾಪೂಗೌಡ ರಾಯಪ್ಪ.—ಸ್ವಾಮಿ, (ಅ)ಗೆ ಉತ್ತರವಾಗಿ 345 ಮಂದಿ ಎಂದು ಕೊಟ್ಟಿದ್ದೀರಿ. ಇದರಲ್ಲಿ ನನ್ನ ಪ್ರಶ್ನೆ ಏನೆಂದರೆ ಈ ಉಪ ಏಜೆಂಟರನ್ನು ನೇಮಿಸಿದ ಕಾರಣಕ್ಕೆ ಆ ಸ್ಥಳದಲ್ಲಿ ಇದ್ದಂಥ ಸಹಕಾರಿ ಸಂಸ್ಥೆಗಳು ಎಷ್ಟು ಇತ್ತು ಮತ್ತು ಎಷ್ಟು ಜನ ಏಜೆಂಟರುಗಳನ್ನಾಗಿ ನೇಮಕ ಮಾಡಿದ್ದಾರೆ ?

† ಶ್ರೀ ಎನ್. ಚಿಕ್ಕೇಗೌಡ.—ಆ ವಿವರ ನನ್ನಲ್ಲಿ ಇಲ್ಲ. ಆದರೆ ಆ ಬಗ್ಗೆ ಜಿಲ್ಲಾವಾರು ಎಷ್ಟೆಷ್ಟು ಬಾಕಿ ಹಣ ಇದೆ ಅದು ಮಾತ್ರ ಇದೆ ಮತ್ತು 1,80,09,000 ರೂಪಾಯಿಗಳಷ್ಟು ಗೊಬ್ಬರ ಹಂಚಿರುವುದರ ಬಗ್ಗೆ ಮಾತ್ರ ಮಾಹಿತಿ ಇದೆ.

ಶ್ರೀ ಬಾಪೂಗೌಡ ರಾಯಪ್ಪ.—ಹಾಗಾದರೆ ತಮ್ಮ ಮುಂದೆ ಈ ಪಟಿಟ ಇರಲಿಕ್ಕಿಲ್ಲ ಎಂದ ಮೇಲೆ, ಈ ಪ್ರಶ್ನೆ ಪೂರ್ಣವಾಗುವುದಿಲ್ಲ. ನುಮಾರು 345 ಮಂದಿ ಏಜೆಂಟರು ಏನು ಇದ್ದಾರೋ ಅವರಿಗೆ 1,80,09,000 ರೂಪಾಯಿಗಳ ಗೊಬ್ಬರವನ್ನು ಕೊಟ್ಟಿದ್ದಾರೆ. ಆದರಲ್ಲಿ 67,76,964-32 ಹೈಸೆಗಳು ಬಾಕಿ ಉಳಿದಿದೆ ಎಂದು ತಮ್ಮ ಪಟ್ಟಿ ಪ್ರಕಾರ ಇದೆ. ಇಷ್ಟು ಹಣ ಅವರಿಂದ ಬರುವುದಿಲ್ಲ ಎನ್ನುವುದು ಖಾತ್ರಿಯಾಗಿದೆ. ಅದುದರಿಂದ ಈ ಕೈಬಿಟ್ಟಿರತಕ್ಕಂಥ ಹಣವನ್ನು ವಸೂಲ್ಮಾಡುವುದಕ್ಕೆ ಏನೇನು ಕಾರ್ಯಕ್ರಮ ಕೈಗೊಂಡಿದ್ದೀರಿ ಮತ್ತು 3 ವರ್ಷದಿಂದಲೂ ಇಷ್ಟು ಹಣವನ್ನು ಓವರ್‌ಡ್ಯೂ ಮಾಡುವುದಕ್ಕೆ ಕಾರಣರು ಯಾರು, ಮತ್ತು ಇದಕ್ಕೆ ಯಾರು ಕಾರಣರಾಗಿದ್ದಾರೋ ಅಂಥಾವರ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—1969 ರಿಂದ 1972 ರವರೆಗೆ ಒಟ್ಟು 15,63,54,948 ರೂಪಾಯಿಗಳ ಮೌಲ್ಯದಷ್ಟು ಗೊಬ್ಬರಗಳನ್ನು ಆಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು ತಮ್ಮ ಕೇಂದ್ರವನ್ನು ತೆರೆಯುವುದಕ್ಕಿಂತ ಮುಂಚೆ ಕೊಟ್ಟಿರುವುದು ! ಅದರಲ್ಲಿ 14,89,3 ,802– 1 ಹೈಸೆಗಳಷ್ಟು ವಸೂಲಾಗಿದೆ. ಇನ್ನು ಬಾಕಿ ಉಳಿದಿರತಕ್ಕಂಥಾದ್ದು 67,76,964-32 ರೂಪಾಯಿಗಳು ಬರಬೇಕಾಗಿದೆ. ಅದಕ್ಕೆ ಕೇಸುಗಳನ್ನು ಹಾಕಿದ್ದಾರೆ. ಸಿವಿಲ್ ಕೋರ್ಟಿನಲ್ಲಿ ಆ ಕೇಸು ನಡೆಯುತ್ತಾ ಇದೆ. ಅದು ಹಂತ ಹಂತವಾಗಿ ಕೆಲವು ಕೇಸುಗಳು ಎಮಿಡೆನ್ಸ್ ಕೂಡ ಆಗಿವೆ. ನಬ್ ಏಜೆನ್ಸಿಯನ್ನು ಬೋರ್ಡ್ ನಿರ್ಣಯದ ಪ್ರಕಾರ ಕೊಟ್ಟರು. ಆಗ್ರೋ ಇಂಡಸ್ಟ್ರೀಸ್‌ನವರು ತಮ್ಮ ಕೇಂದ್ರವನ್ನು ತೆರೆದ ಮೇಲೆ ಇವರಿಗೆ ಕೊಡುವುದನ್ನು ನಿಲ್ಲಿಸಿದ್ದಾರೆ. ಈಗ ಆಗ್ರೋ ಇಂಡಸ್ಟ್ರೀ ಕೇಂದ್ರುಗಳು ಈ ಕೆಲಸವನ್ನು ನಿರ್ವಹಿಸುತ್ತಾ ಇರುವುದರಿಂದ, ಬಾಕಿ ಹಣ ಬರದೇ ಇರುವಂಥಾವರ ಮೇಲೆ ಸಿವಿಲ್ ಕೇಸ್ ಹಾಕಿದ್ದಾರೆ. ಕೆಲವು ಹಂತಹಂತದಲ್ಲಿ ಈ ಕೇಸು ನಡೆಯುತ್ತಾ ಇದೆ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯುಡು.—ತಮ್ಮ ಉತ್ತರ ನೋಡಿದರೆ ಏನು ಅರ್ಥವಾಗುತ್ತದೆ ಎಂದರೆ ಮೂರನೇ ಒಂದು ಭಾಗದಷ್ಟು ಹಣ ಬಾಕಿ ಇದೆ ಎನ್ನುವುದು ಅರ್ಥವಾಗುತ್ತದೆ ಇಷ್ಟು ಹಣ ಬಾಕಿ ಇರಲು ಕಾರಣ ಏನು ? ಇನ್ನು ಎರಡನೆಯವಾಗಿ ಈ ನಬ್ ಏಜೆಂಟರನ್ನು ನೇಮಕ ಮಾಡುವುದಕ್ಕೆ ಯಾವುದಾದರೂ ರೀತಿನೀತಿಗಳನ್ನು ಇಟ್ಟುಕೊಂಡು ಕೊಟ್ಟಿದ್ದಾರೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಈಗಾಗಲೇ ನಾನು ಹೇಳಿದ ಹಾಗೆ ಆಗ್ರೋ ಇಂಡಸ್ಟ್ರೀಸ್‌ನವರು ತಮ್ಮ ಕೇಂದ್ರವನ್ನು ತೆರೆದ ಮೇಲೆ ಈ ಪ್ರಶ್ನೆ ಬರುವುದಿಲ್ಲ. ಹಿಂದೆ ಏಜೆಂಟರ ಮೂಲಕ ಏನು ಕೊಡುತ್ತಾ ಇದ್ದರು ಅವಾಗ ಕೊಟ್ಟದ್ದು ಇದು. ಇವರು ತೆಗೆದ ಮೇಲೆ ಅವರಿಗೆ ಕೊಡುವುದನ್ನು ತಕ್ಷಣ ನಿಲ್ಲಿಸಿದ್ದಾರೆ. ಬಾಕಿ ಇರತಕ್ಕಂಥ ಹಣವನ್ನು ವಸೂಲ್ಮಾಡುವುದಕ್ಕೆ ಅವರ ಮೇಲೆ ಕೇಸು ಹಾಕಿದ್ದಾರೆ. ಅದರ ಮೇಲೆ ಸಿವಿರ್ ಕೇಸ್ ನಡೆಯುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ತಾವು 67,76,964-32 ರೂಪಾಯಿಗಳಷ್ಟು ಹಣ ಬಾಕಿ ಇದೆ ಎಂದು ಹೇಳಿದ್ದೀರಿ. ಮುಖ್ಯವಾಗಿ ಸಾಕಷ್ಟು ಸೆಕ್ಯೂರಿಟಿ ಪಡೆಯದೇ ಆ ಖಾಸಗೀ ಜನರಿಗೆ ಕೊಟ್ಟಿದ್ದರಿಂದ ಇಷ್ಟು ಹಣ ಬಾಕಿ ಇರುವುದಕ್ಕೆ ಕಾರಣ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ? ಮತ್ತು ಎಷ್ಟು ಜನರ ಮೇಲೆ ಹಣ ವಸೂಲ್ಮಾಡುವುದಕ್ಕೆ ಕೇಸು ಹಾಕಿದ್ದಾರೆ ಅವರಿಂದ ಯಾವ ಯಾವ ಕಾಲದಲ್ಲಿ ಹಣ ಬಂದಿದೆ ; ಅದರ ಬಗ್ಗೆ ಸರ್ಕಾರಕ್ಕೆ ವರದಿ ಬಂದಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಯಾವ ಯಾವ ಕಾಲದಲ್ಲಿ ಎಷ್ಟು ಎಷ್ಟು ಹಣ ವಸೂಲ್ಮಾಡಿದ್ದಾರೆ ಎಂಬ ಆ ವಿವರ ಈಗ ನನ್ನಲ್ಲಿಲ್ಲ. ಬಾಕಿ ಇರುವವರ ಮೇಲೆ ಕೇಸು ಹಾಕಿದ್ದಾರೆ. ನನ್ನ ಮುಂದೆ ಏನು ವಿವರ ಇದೆಯೋ ಅದನ್ನು ಮಾತ್ರ ಹೇಳುತ್ತೇನೆ.

Sri KAGODU THIMMAPPA.—In case of individuals, they have not taken sufficient security. Is it a fact ?

ಶ್ರೀ ಎನ್. ಚಿಕ್ಕೇಗೌಡ.—ಆ ವಿವರಗಳು ನನ್ನ ಮುಂದೆ ಇಲ್ಲ. ಪ್ರತ್ಯೇಕ ಪ್ರಶ್ನೆ ಕೇಳಿದರೆ ಅದನ್ನು ಒದಗಿಸುತ್ತೇನೆ. The Board resolved to take sufficient security and then give it.

† Indicates that the remarks or speeches have not been revised by the member concerned.

ಶ್ರೀ ಎಸ್. ಜಿ. ಹಾಲಪ್ಪ.—ಸ್ವಾಮಿ, ನಾನು ಈ ಬಗ್ಗೆ ಕೇಳುವುದು ಏನೆಂದರೆ ಆವರು ಸೆಕ್ಯೂರಿಟಿ ಏನಾದರೂ ತೆಗೆದುಕೊಂಡು ಕೊಟ್ಟಿದ್ದಾರೆಯೇ ಅಥವಾ ಅವರ ಪ್ರಾಪರ್ಟಿ ಏನು ಇದೆ ಅದನ್ನ ಏನಾದರೂ ವೆರಿಫೈ ಮಾಡಿ ಕೊಟ್ಟಿದ್ದಾರೆಯೇ ಅಥವಾ ಇದರ ಬಗ್ಗೆ ಅವರು ಏನಾದರೂ ಲೀಗರ್ ಆಡ್ವೈಸರನ್ನು ಇಟ್ಟುಕೊಂಡಿದ್ದರೆ ಅವರ ಅಭಿಪ್ರಾಯ ಏನು ಇತ್ತು ಎನ್ನುವ ಮಾಹಿತಿ ತಿಳಿಸುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಆ ಮಾಹಿತಿ ನನ್ನಲ್ಲಿ ಇಲ್ಲ.

ಶ್ರೀ ಜೆ. ಎಲ್. ಕಬಾಡಿ.—ಇದರಲ್ಲಿ ಕೊಟ್ಟಿರತಕ್ಕಂಥ ಅಂಕೆ ಸಂಖ್ಯೆಗಳನ್ನು ನೋಡಿದರೆ ರಾಜ್ಯದ ಕೃಷಿ ಕೈಗಾರಿಕಾ ಸಂಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ಅಲ್ಲಿಯ ಅಧಿಕಾರಿಗಳು ತಮಗೆ ಬೇಕಾದಂಥ ವ್ಯಕ್ತಿಗಳಿಗೆ ಈ ಏಜೆನ್ಸಿಯನ್ನು ಕೊಡುತ್ತಾರೆ ಮತ್ತು ಅವರು ಸೆಕ್ಯೂರಿಟಿಯನ್ನು ಇದರ ಬಗ್ಗೆ ಹೊಂದದೇ ಇರುವುದರಿಂದ ಇಷ್ಟು ಹಣವನ್ನು ವಸೂಲ್ಮಾಡದೇ ಇರುವುದಕ್ಕೆ ಅದೂ ಒಂದು ಕಾರಣ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿ ಯಾರು ಇದ್ದಾರೋ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಯೋಚನೆ ಮಾಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರು ಹೇಳತಕ್ಕಂಥಾದ್ದು ಅದು ಅವರ ಸ್ವಂತ ಅಭಿಪ್ರಾಯ. ಬಾಕಿ ಇರತಕ್ಕಂಥ ಹಣವನ್ನು ವಸೂಲ್ಮಾಡುವುದಕ್ಕೆ ತಕ್ಕ ಕ್ರಮ ತೆಗೆದುಕೊಂಡಿದ್ದಾರೆ. ಒಂದು ವೇಳೆ ಯಾರಾದರೂ ಅಧಿಕಾರಿ ತಮಗೆ ಬೇಕಾದಂಥವರಿಗೆ ಸೆಕ್ಯೂರಿಟಿ ಇಲ್ಲದೇ ಕೊಟ್ಟಿರುವಂಥ ಪ್ರಕರಣವನ್ನು ಸರ್ಕಾರದ ಗಮನಕ್ಕೆ ತಂದರೆ ಸಂಬಂಧಪಟ್ಟ ಅಧಿಕಾರಿ ಮೇಲೆ ಜವಾಬ್ದಾರಿ ಹೊರಿಸಿ ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ಸರ್ಕಾರ ಹಿಂದುಮುಂದು ನೋಡುವುದಿಲ್ಲ ಎಂದು ಹೇಳುತ್ತೇನೆ.

ಶ್ರೀ ಎಂ. ಎಚ್. ಜಯಪ್ರಕಾಶನಾರಾಯಣ್.—ಸ್ವಾಮಿ, ಈ ನಬ್ ಏಜೆಂಟರನ್ನು ಅಗ್ರೋ ಇಂಡಸ್ಟ್ರೀಸ್ ಕಾರ್ಪೋರೇಷನ್ನಿನವರು ನೇಮಿಸುವಾಗ ಪ್ರತಿಯೊಬ್ಬರಿಂದಲೂ ಎಷ್ಟು ಹಣವನ್ನು ಸೆಕ್ಯೂರಿಟಿಯಾಗಿ ತೆಗೆದುಕೊಂಡಿದ್ದಾರೆ ? ಆ ಸೆಕ್ಯೂರಿಟಿ ಹಣ ಸೇರಿಸಿಕೊಂಡು ಇದರ ಬ್ಯಾಲೆನ್ಸ್ ತೋರಿಸಿದೆಯೇ ಅಥವಾ ಅದನ್ನು ಬಿಟ್ಟು ಈ ಬ್ಯಾಲೆನ್ಸ್ ತೋರಿಸಿದೆಯೇ ?

ಶ್ರೀ ಎನ್. ಚಿಕ್ಕೇಗೌಡ.—ಆ ವಿವರ ನನ್ನಲ್ಲಿ ಇಲ್ಲ.

ಶ್ರೀ ಬಾಪೂಗೌಡ ರಾಯಪ್ಪ.—ಅಧ್ಯಕ್ಷರೇ, ನನ್ನ ಪ್ರಶ್ನೆಯ ಉದ್ದೇಶವಾದರೂ ಇಷ್ಟೆ. ಸುಮಾರು 345 ಮಂದಿ ನಬ್ ಏಜೆಂಟರು ಏನು ಇದ್ದಾರೋ ಅವರಿಂದ ಈ ಪೂರ್ತಾ ದುಡ್ಡು ವಸೂಲಾಗುವುದಿಲ್ಲ. ಏತಕ್ಕೆಂದರೆ ಈ ಅಧಿಕಾರಿಗಳು ನಬ್ ಏಜೆಂಟರನ್ನು ನೇಮಕ ಮಾಡುವಾಗ ವೈಯಕ್ತಿಕವಾಗಿ ತಮಗೆ ಬೇಕಾದಂಥವರನ್ನು ನೇಮಕ ಮಾಡುವುದರಿಂದ ಇಷ್ಟು ಹೊಬಲಗು ಉಳಿಯುವುದಕ್ಕೆ ಕಾರಣವಾಗಿದೆ. ಇದರಲ್ಲಿ ಈರೀತಿಯ ವ್ಯವಹಾರವಾಗಿರುವುದರಿಂದ ಈ ಬಗ್ಗೆ ಯಾರು ಯಾರನ್ನು ನಬ್ ಏಜೆಂಟರನ್ನಾಗಿ ನೇಮಕ ಮಾಡಿದ್ದಾರೋ ಅವರ ಹೆಸರುಗಳನ್ನು ಕೊಡುತ್ತೀರಾ ?

ಎರಡನೆಯದಾಗಿ ಇದು ವಸೂಲಾಗುವುದಿಲ್ಲ. ಆದುದರಿಂದ ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು, ಈ ಬಗ್ಗೆ ಇನ್ವೆಸ್ಟಿಗೇಟ್ ಮಾಡಿ ಯಾರು ಯಾರನ್ನು ನೇಮಕ ಮಾಡಿದ್ದಾರೆ ಆ ಒಂದು ಪಟ್ಟಿಯನ್ನು ಕೊಡುತ್ತೀರಾ ?

ಶ್ರೀ ಎನ್. ಚಿಕ್ಕೇಗೌಡ.—ಮಾನ್ಯ ಸದಸ್ಯರಿಗೆ ಬೇಕಾದರೆ ಪಟ್ಟಿ ತರಿಸಿಕೊಡುತ್ತೇನೆ.

LOANS FOR DIGGING WELLS AND PUMPSETS

214. Sri V. V. WAI (Shirahatti) .—

Will the Minister for Co-operation be pleased to state :—

(a) the number of loan applications submitted to the Lakshmeswara Land Development Bank during the year 1972-73 for digging of wells and pump sets ;